


ಓದುವ ಅಭಿರುಚಿ ಬೆಳೆಸುವ

# ಸಾಹಿತ್ಯ ಮಂಟಪ ೩

ಇಲ್ಲಿನ ಕಥೆ, ಕವನಗಳನ್ನು ನೀವೂ
ಓದಿರಿ; ಬೇರೆಯವರಿಗೂ
ಓದಿ ಹೇಳಿರಿ.

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಜೂನ್–ಜುಲೈ ೨೦೨೪–೨೫

ಆರಂಭ ಯೋಜನೆ

Arambha 2024-25 Project
is Supported by Many
Individual Donors

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

# ಸದಾಶಯ

ಪ್ರೀತಿಯ ಮಕ್ಕಳೇ,

ಓದುವ ಅಭಿರುಚಿ ಹೆಚ್ಚಿಸಿಕೊಳ್ಳಲು ಪ್ರೇರಣೆ ನೀಡುವ 'ಸಾಹಿತ್ಯ ಮಂಟಪ' ನಿಮ್ಮ ಕೈಯಲ್ಲಿದೆ. ಇದರಲ್ಲಿ ಸ್ವರಚಿತ ಕಥೆ – ಕವನಗಳು, ಮೂಲ ಇಂಗ್ಲೀಷ್ ಕಥೆಯೊಂದಿಗೆ ಅದರ ಅನುವಾದ ಕೂಡ ಇವೆ.

ನಮ್ಮನಮ್ಮ ವ್ಯಕ್ತಿತ್ವವನ್ನು ಸುಂದರವಾಗಿ ಅರಳಿಸುವ ಶಕ್ತಿ ಹೊಂದಿರುವ ಸಾಹಿತ್ಯ ಮಂಟಪವು ನಿಮ್ಮಲ್ಲಿ ಹೊಸ ಆಲೋಚನೆಗಳಿಗೆ ದಾರಿದೀಪವಾಗಲಿ ಎಂಬುದು ನಮ್ಮ ಸದಾಶಯ.

ಪ್ರತಿ ಕಥೆಯ ಕೊನೆಗೆ ಆಕರಗಳನ್ನು ಕೊಡಲಾಗಿದೆ. ಶಿಕ್ಷಕರ ಸಹಾಯದಿಂದ ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಆ ಪುಸ್ತಕಗಳನ್ನು ತರಿಸಿಕೊಂಡು ಇನ್ನೂ ಹೆಚ್ಚು ಹೆಚ್ಚು ಓದಲು ಯತ್ನಿಸಿ.

ಸಾಹಿತ್ಯ ಮಂಟಪವನ್ನು ಸವಿದ ಬಳಿಕ ನಿಮ್ಮ ಅಭಿಪ್ರಾಯಗಳನ್ನು ಧ್ವನಿಯೊಂದಿಗೆ ಹಂಚಿಕೊಂಡರೆ ನಮಗೆಲ್ಲಾ ಸಂತಸವಾಗುತ್ತದೆ.

ಧನ್ಯವಾದಗಳೊಂದಿಗೆ...

**– ಧ್ವನಿ ಬಳಗ**

ಈ ಸಲದ

# ಸಾಹಿತ್ಯ ಮಂಟಪದಲ್ಲಿ......


## * ಚತುರ ಚಿಣ್ಣರು

– ಹ.ಮ. ಪೂಜಾರ – ೪

## * ಮೀನು

– ತಿರುಮಲಮ್ಮ – ೧೧

## * ಆನೆಗಳನ್ನು ಕೊಲ್ಲದ ನರಿ

– ಪಂಚತಂತ್ರದ ಕಥೆ – ೧೭

## * ಬಾನು – ನೀಲು

– ಪ್ರೇಮಾ ಶಿವಾನಂದ – ೨೪

## * Baanu - Neelu

– ಕು. ವಚನಶ್ರೀ.ಎಸ್.ಹೆಚ್ – ೨೭

## * ಕವನ

– ಸುರೇಶ ಕಂಬಳಿ – ೩೨

# ಚತುರ ಚಿಣ್ಣರು

ರಚನೆ: ಹ.ಮ. ಪೂಜಾರ
ಸಿಂಧಗಿ, ವಿಜಯಪುರ



**ಪು**ನೀತನ ಅಜ್ಜನ ಮನೆ ಹಳ್ಳಿಯಲ್ಲಿ ಇತ್ತು. ಪ್ರತಿ ವರುಷ ಬೇಸಿಗೆಯ ರಜೆಯಲ್ಲಿ ಪುನೀತ ಅಜ್ಜನ ಮನೆಗೆ ಹೋಗುತ್ತಿದ್ದ. ನಾಲ್ಕಾರು ದಿನ ಇದ್ದು ಬರುತ್ತಿದ್ದ. ಹಳ್ಳಿಯ ವಾತಾವರಣ ಅನುಭವಿಸುತ್ತಿದ್ದ. ಅಜ್ಜನ ಜೊತೆ ತೋಟಕ್ಕೆ ಹೋಗುತ್ತಿದ್ದ. ತೋಟದ ಭಾವಿಯಲ್ಲಿ ಈಜುತ್ತಿದ್ದ. ತೋಟದಲ್ಲಿಯ ಹಣ್ಣುಗಳನ್ನು ಸವಿಯುತ್ತಿದ್ದ. ಉಲ್ಲಾಸದಿಂದ ಸಮಯ ಕಳೆಯುತ್ತಿದ್ದ.

ಈ ಬಾರಿ, ತನ್ನ ಗೆಳೆಯ ಕರೀಮನನ್ನು ಜೊತೆಗೆ ಕರೆದುಕೊಂಡು ಅಜ್ಜನ ಊರಿಗೆ ಹೋದ. ಅಜ್ಜ ಮಕ್ಕಳನ್ನು ಸಂತೋಷದಿಂದ ಬರಮಾಡಿಕೊಂಡ. ಅಜ್ಜಿ ಮಕ್ಕಳಿಗೆ ಕುಡಿಯಲು ಹಾಲು ಕೊಟ್ಟಳು. ಹಾಲು ಕುಡಿದು ಮಕ್ಕಳು ಅಂಗಳಕ್ಕೆ ಬಂದರು. ಅಂಗಳದಲ್ಲಿ ಎರಡು ಮೇಕೆ ಮರಿಗಳು ಓಡಾಡುತ್ತಿದ್ದವು.

ಮಕ್ಕಳು ಅವುಗಳನ್ನು ಕುತೂಹಲದಿಂದ ನೋಡಿದರು. ಅವುಗಳ ಹಿಂದೆ ತಾವೂ ಓಡಾಡಿದರು. ಆ ಮುದ್ದು ಮರಿಗಳನ್ನು ಹಿಡಿಯಬೇಕೆಂದರು. ಅವು 'ಟಣ್ಣನೆ' ಜಿಗಿದು ಓಡುತ್ತಿದ್ದವು. ಅವುಗಳನ್ನು ಹಿಡಿಯುವುದು ಮಕ್ಕಳಿಗೆ ಕಷ್ಟವಾಯಿತು. ಕೊನೆಗೂ ಅವುಗಳನ್ನು ಹಿಡಿದುಬಿಟ್ಟರು. ಮುದ್ದಾದ ಮರಿಗಳು, ಮೃದುವಾದ ತುಪ್ಪಳ, ಮಕ್ಕಳು ಅವುಗಳ ಮೈನೇವರಿಸಿದರು. ಅವುಗಳ ಜೊತೆ ಆನಂದದಿಂದ ಕಾಲ ಕಳೆದರು.

ಸಾಯಂಕಾಲ ಅಜ್ಜ ಪಡಶಾಲೆಯಲ್ಲಿ ಕುಳಿತಿದ್ದ. ಪುನೀತ ಅಜ್ಜನ ಹತ್ತಿರ ಹೋದ.

"ಅಜ್ಜ... ನಾಳೆ ನಾವೂ ತೋಟಕ್ಕೆ ಬರತೀವಿ." ಎಂದು ಹೇಳಿದ. ಅಜ್ಜ ಸರಿ ಎಂದು ತಲೆ ಅಲ್ಲಾಡಿಸುತ್ತ,"ತೋಟದ ಕಡೆ ನೀವು ಬಂದರೆ ಬಹಳ ಎಚ್ಚರಿಕೆಯಿಂದ ಇರಬೇಕು. ಇತ್ತೀಚೆಗೆ ಒಂದು ಕರಡಿ ಬಂದಿದೆ. ಊರ ಹೊರಗಿನ ಗುಡ್ಡದಲ್ಲಿ ಸೇರಿಕೊಂಡಿದೆ. ಆಗಾಗ್ಗೆ ಊರ ಹೊರ ವಲಯದಲ್ಲಿ ಸುತ್ತಾಡುತ್ತಾ ಇರತದೆ. ಈಗಾಗಲೇ ಕೆಲವರ ಮೇಲೆ ದಾಳಿ ಮಾಡಿದೆ. ಅವರಿಗೆ ಮೈತುಂಬ ಗಾಯಗಳಾಗಿವೆ." ಎಂದು ಅಜ್ಜ ಎಚ್ಚರಿಕೆ ಕೊಟ್ಟ. ಅಜ್ಜನ ಮಾತು ಕೇಳಿ ಮಾಕ್ಕಳು ಹೆದರಿದರು. ಆದಾಗ್ಯೂ ಸ್ವಲ್ಪ ಧೈರ್ಯ ತಂದುಕೊಂಡರು.

ಮಾರನೆಯ ದಿನ ಮುಂಜಾನೆ ಮಕ್ಕಳು ತೋಟಕ್ಕೆ ಹೊರಟು ನಿಂತರು. ಅಜ್ಜ ಬಂಡಿಯನ್ನು ಸಜ್ಜುಗೊಳಿಸಿದ. ಅಜ್ಜಿ ಬುತ್ತಿ ಕಟ್ಟಿಕೊಂಡಳು. ಮಕ್ಕಳು ಬಂಡಿಯನ್ನೇರಿದರು. ಬಂಡಿ ಮುಂದೆ ಸಾಗಿತು. ಬಂಡಿಯಲ್ಲಿ ಮೂರ್ನಾಲ್ಕು ಬಡಿಗೆಗಳಿದ್ದವು.

ಬಡಿಗೆಗಳನ್ನು ನೋಡಿದ

ಪುನೀತ,"ಈ ಬಡಿಗೆಗಳು ಏತಕ್ಕೆ ಅಜ್ಜ" ಎಂದು ಕುತೂಹಲದಿಂದ ಕೇಳಿದ. "ಕರಡಿ ಕಂಡರೆ ಅದಕ್ಕೆ ಹೆದರಿಸಲು, ಪ್ರಸಂಗ ಬಂದರೆ ಅದರೆ ಜೊತೆ ಹೋರಾಡಲಿಕ್ಕೂ ಬೇಕಾಗ್ತದೆ."ಎಂದು ಅಜ್ಜ ಉತ್ತರಿಸಿದ.

ಹೀಗೆ ಮಾತಾನಾಡುತ್ತಲೇ ತೋಟವನ್ನು ತಲುಪಿದರು.

ಅಜ್ಜ ತೋಟದ ಕೆಲಸದಲ್ಲಿ ತೊಡಗಿದ್ದ. ಮಕ್ಕಳು ಒಂದೊಂದು ಬಡಿಗೆಯನ್ನು ಎತ್ತಿಕೊಂಡರು. ಅಜ್ಜನಿಗೆ ಗೊತ್ತಾಗದಂತೆ ತೋಟದೀಂದ ಹೊರಟರು. ನಿರ್ಭಯದಿಂದಲೇ ಗುಡ್ಡದ ಸಮೀಪ ಹೋದರು. ಅಲ್ಲಿ ಅವರು ಸುತ್ತಾಡಿದರು. ಆಗ ಅವರಿಗೆ ಗುರ್..... ಗರ್......ಎಂಬ ಶಬ್ಧ ಕೇಳಿತು. ಅವರ ಕಿವಿಗಳು ಚುರುಕುಗೊಂಡವು. ಶಬ್ಧ ಬರುವ ದಿಸೆಗೆ ನಿಧಾನವಾಗಿ ಚಲಿಸಿದರು. ಗುಡ್ಡದಲ್ಲಿ ಅವರಿಗೆ ಒಂದು ಗುಹೆ ಕಂಡಿತು. ಮಕ್ಕಳು ಅದರ ಸಮೀಪಕ್ಕೆ ಹೋದರು. ಸ್ವಲ್ಪ ದೂರ ನಿಂತು ಪುನೀತ ಇಣಿಕಿ ನೋಡಿದ.

ಗುಹೆಯ ಒಳಗಿನಿಂದ ಗುರ್..... ಗರ್..... ಎಂಬ ಶಬ್ದ ಬರುವುದು ಖಚಿತವಾಯಿತು. ಕರಡಿ ಒಳಗಡೆ ನಿದ್ರಿಸುತ್ತಿರಬಹುದೆಂದು ತಿಳಿದರು. ಚತುರ ಚಿಣ್ಣರು ಕೂಡಲೇ ಕಾರ್ಯ ಪ್ರವರ್ತರಾದರು.

ಹೊಲಗಳಿಗೆ ಬೇಲಿ ಹಚ್ಚಲೆಂದು ಮುಳ್ಳು ಕಂಟಿಗಳನ್ನು ರೈತರು ಸಂಗ್ರಹಿಸಿ ಇಟ್ಟಿದ್ದರು. ಕಂಟಿಗಳ ತೊಪ್ಪಲೆಲ್ಲ ಉದುರಿ ಕೇವಲ ಮುಳ್ಳುಗಳೇ ಕಾಣುತ್ತಿದ್ದವು. ಆ ಕಂಟಿಗಳನ್ನು ಎಳೆದು ತಂದರು. ಗುಹೆಯ ಬಾಯಿಯ ಹತ್ತಿರ ತಂದು ಇಟ್ಟರು. ಇಬ್ಬರೂ ಕೂಡಿ ಬಡಿಗೆಯ ಸಹಾಯದಿಂದ ಸಣ್ಣ ಸಣ್ಣ ಕಂಟಿಗಳನ್ನು ಗುಹೆಗೆ ತಳ್ಳಿದರು. ದೊಡ್ಡ ಕಂಟಿಗಳನ್ನು ಅಡ್ಡಡ್ಡಲಾಗಿ ಗುಹೆಯ ಬಾಯಿಗೆ ಇಟ್ಟು ಮುಚ್ಚಿದರು. ಸಮೀಪದಲ್ಲಿ ಬಿದ್ದ ದೊಡ್ಡ ಕಲ್ಲುಗಳನ್ನು ತಂದರು. ಮುಳ್ಳುಕಂಟಿಗಳ ಮೇಲೆ ಇಟ್ಟರು.

ಕೂಡಲೇ ಮಕ್ಕಳು ಓಡಿ ಬಂದು ಅಜ್ಜನಿಗೆ ವಿಷಯ ತಿಳಿಸಿದರು. ಅಜ್ಜ

ಆಶ್ಚರ್ಯಚಕಿತನಾದ. ನೆರೆಹೊರೆಯ ರೈತರನ್ನು ಕೂಗಿ ಕರೆದ. ಎಲ್ಲರೂ ಬಂದರು. ಮಕ್ಕಳ ಚತುರಮತಿಗೆ ಬೆನ್ನು ತಟ್ಟಿದರು. ಕೂಡಲೇ ಸಮೀಪದ ಪಟ್ಟಣಕ್ಕೆ ಹೋದರು. ಅರಣ್ಯಾಧಿಕಾರಿಗೆ ವಿಷಯ ತಿಳಿಸಿದರು. ತಕ್ಷಣ ಅರಣ್ಯಾಧಿಕಾರಿ ತಮ್ಮ ಸಿಬ್ಬಂದಿಯನ್ನು ಕಳಿಸಿದ.

ಅರಣ್ಯ ಇಲಾಖೆ ಸಿಬ್ಬಂದಿ ಬೋನು ಸಮೇತ ಬಂದಿದ್ದರು. ಗುಹೆಯ ದ್ವಾರದ ಹತ್ತಿರವೇ ಬೋನು ಇಟ್ಟರು. ನಿಧಾನವಾಗಿ ಮುಳ್ಳುಕಂಟಿಗಳನ್ನು ತೆರೆದರು. ಅಷ್ಟೊತ್ತಿಗಾಗಲೇ ಕರಡಿ ಹೊರಬರಲು ಪ್ರಯತ್ನಿಸುತ್ತಿತ್ತು. ಅದಕ್ಕೆ ಮೈತುಂಬ ಮುಳ್ಳುಗಳು ಚುಚ್ಚಿದ್ದವು. ಮೈತುಂಬ ಗಾಯಗಳಾಗಿದ್ದವು. ಕರಡಿ ನಿಸ್ತೇಜಗೊಂಡಿತ್ತು. ಅರಣ್ಯ ಇಲಾಖೆಯ ಸಿಬ್ಬಂದಿಯವರು ಸುಲಭದಲ್ಲಿ ಅದನ್ನು ಬೋನಿಗೆ ಸೇರಿಸಿದರು. ಪಟ್ಟಣಕ್ಕೆ ಒಯ್ದರು. ಅದಕ್ಕೆ ಉಪಚರಿಸಿ ದಟ್ಟ ಕಾಡಿಗೆ ಒಯ್ದು ಬಿಟ್ಟರು.

ಇತ್ತ ಹಳ್ಳಿಯಲ್ಲಿ ಜನರು ಮಕ್ಕಳನ್ನು ಹೊಗಳಿದ್ದೇ ಹೊಗಳಿದ್ದು. ಮಾರನೆಯ ದಿನ ಊರ ಹಿರಿಯರೆಲ್ಲ ಸಭೆ ಸೇರಿದರು. ಹಿರಿಯರ ಸಮ್ಮುಖದಲ್ಲಿ ಪಂಚಾಯತಿಯವರು ಮಕ್ಕಳಿಗೆ ಬಹುಮಾನ ನೀಡದರು. ಚತುರ ಚಿಣ್ಣರು ಎಂದು ಹೊಗಳಿದರು. ಸನ್ಮಾನಿಸಿ ಗೌರವಿಸಿದರು. *

ಆಕರ: ಚತುರ ಚಿಣ್ಣರು,
ಮಕ್ಕಳ ಕಥಾಸಂಕಲನ
ಲೇಖಕರು: ಹ.ಮ. ಪೂಜಾರ
ವಿದ್ಯಾಚೇತನ ಪ್ರಕಾಶನ
ಮೊ.ನಂ: ೯೪೪೮೯೮೭೨೨

**"ಮನ ಮಂಥನ"**

ಕಥೆಯಲ್ಲಿನ ಗೆಳೆಯರಂತೆ ನೀನೂ ಕೂಡ ಸಂಗಡಿಗರ ಜೊತೆಗೂಡಿ ಸಾಹಸ ಮಾಡಿದ ಪ್ರಸಂಗವೇನಾದರೂ ಇದೆಯಾ? ಇದ್ದರೆ ಅದನ್ನು ಗೆಳೆಯ–ಗೆಳತಿಯರೊಂದಿಗೆ ಹಂಚಿಕೊ.

# ಮೀನು

ರಚನೆ: ತಿರುಮಲಮ್ಮ



ಮುಕ್ತ ಓದಿಗಾಗಿ

**ಶ**ಂಕರ ಪುಟ್ಟ ಹುಡುಗ. ಒಂದು ಸಲ ಅಮ್ಮನ ಮೇಲೆ ಕೋಪಿಸಿಕೊಂಡು ನದಿ ತೀರಕ್ಕೆ ಬಂದ. "ಅಮ್ಮ ನನಗೇಕೆ ಎಲ್ಲಾ ತಿಂಡಿಯನ್ನೂ ಕೊಡಲಿಲ್ಲ." ಎನ್ನುವುದೇ ಅವನ ಕೋಪಕ್ಕೆ ಕಾರಣವಾಗಿತ್ತು. ನದಿಯ ತೀರದಲ್ಲಿ ಕುಳಿತು, "ನದಿಯ ನೀರನ್ನೇ ಕುಡಿಯುತ್ತೇನೆ." ಎಂದುಕೊಳ್ಳುತ್ತಾ ನೀರು ಕುಡಿಯಲು ಬಗ್ಗಿದ. ಆಗ ಅಲ್ಲೊಂದು ಮೀನು ಕಾಣಿಸಿತು.

"ಆಹಾ! ಎಷ್ಟು ದೊಡ್ಡ ಮೀನು! ಬಾ

ನನ್ನ ಜೇಬಿನಲ್ಲಿ ಸ್ವಲ್ಪ ಪುರಿ ಇದೆ ತಿನ್ನು.” ಎನ್ನುತ್ತ ಜೇಬಿನಲ್ಲಿದ್ದ ಸ್ವಲ್ಪ ಪುರಿಯನ್ನು ನೀರಿಗೆ ಹಾಕಿದ. ಮೀನು ಪುರಿಯನ್ನು ತಿಂದು ಈಜಿಕೊಂಡು ಮುಂದೆ ಹೊರಟೇ ಹೋಯಿತು. ಶಂಕರನೂ ನೀರು ಕುಡಿದ. ಅವನ ಕೋಪವು ತಣ್ಣಗಾಗಿತ್ತು. ಅವನು ಮನೆಯ ಕಡೆಗೆ ಹೊರಟ. ಶಂಕರನು ಪ್ರತಿದಿನ ನದಿಯ ತೀರಕ್ಕೆ ಹೋಗುತ್ತಿದ್ದನು. ಅದೇ ಮೀನು ಸಮಯಕ್ಕೆ ಸರಿಯಾಗಿ ಅಲ್ಲಿಗೆ ಬರುತ್ತಿತ್ತು. ಪುರಿಯನ್ನು ತಿಂದು ಸ್ವಲ್ಪ ಹೊತ್ತು ಅವನ ಹತ್ತಿ ಆಡಿ ಹೊರಟು ಹೋಗುತ್ತಿತ್ತು.

ಒಂದು ದಿನ ಶಂಕರ,“ಮೀನೇ, ಬಾ ನಮ್ಮ ಮನೆಗೆ ಹೋಗೋಣ.” ಎಂದು ಕರೆದ. “ನಾನು ನೀರಿನಿಂದ ಹೊರಗೆ ಬರಲಾರೆ. ನನ್ನ ವಾಸ ನೀರಿನಲ್ಲಿಯೇ: ಓಡಾಡುವುದೂ ನೀರಿನಲ್ಲಿಯೇ. ನಾನು ಜಲಚರ ಪ್ರಾಣಿ. ನೀರಿನಿಂದ ಹೊರಬಂದರೆ ಸತ್ತು ಹೋಗುತ್ತೇನೆ.” ಎಂದಿತು ಮೀನು. ಅಷ್ಟರಲ್ಲಿಯೇ ಒಂದು ಕಪ್ಪೆಯ ಮರಿ

ಕುಪ್ಪಳಿಸುತ್ತಾ ಅಲ್ಲಿಗೆ ಬಂದು, "ನಾನು ನೆಲದ ಮೇಲೂ ನಡೆಯುತ್ತೇನೆ. ನೀರಿನಲ್ಲೂ ಓಡಾಡಬಲ್ಲೆ. ನಾನೇ ಬರುತ್ತೇನೆ." ಎಂದಿತು.

ಶಂಕರ,"ಅಂದರೆ ನೀನು ದ್ವಿಚರ ಪ್ರಾಣಿ. ನೆಲದ ಮೇಲೂ ಓಡಾಡಬಲ್ಲೆ; ನೀರಿನಲ್ಲಿಯೂ ಓಡಾಡಬಲ್ಲೆ. ನೀನು ಆಮೆ, ಮೊಸಳೆಯ ಗುಂಪಿಗೆ ಸೇರಿದ ಪ್ರಾಣಿಯಲ್ಲವೆ?" ಕಪ್ಪೆ,"ಹೌದು ಹೌದು, ನಾನೂ ನಿನ್ನ ಜೊತೆಯಲ್ಲಿ ಬರಲೇನು?" ಎಂದಿತು. ಆಗ ಶಂಕರ,"ನೀನು ಬರಬೇಕಾದರೆ ನಿನ್ನ ಅಮ್ಮನನ್ನು ಕೇಳಿ ನಾಳೆ ಬಾ." ಎಂದ. ಕಪ್ಪೆ ಅಲ್ಲಿಂದ ಹೊರಟು ಹೋಯಿತು.

ದಾರಿಯಲ್ಲಿ ಹೋಗುತ್ತಾ ಶಂಕರ ಯೋಚಿಸಿದ,"ನಾನು ಭೂಚರ. ನೆಲದ ಮೇಲೆ ಓಡಾಡುವ ಪ್ರಾಣಿಗಳೆಲ್ಲವೂ ಭೂಚರಗಳು." ಹಾಗೆ ಮುಂದೆ ಹೋಗುತ್ತಾ ದಾರಿಯಲ್ಲಿ ಒಂದು ಗಿಳಿಯ ಮರಿ ಬಿದ್ದಿರುವುದನ್ನು ಶಂಕರ ನೋಡಿದ. ಅದನ್ನು ಮನೆಗೆ ತೆಗೆದುಕೊಂಡು ಹೋಗಿ ಔಷಧಿ ಹಾಕಿದ. ಒಂದು ಪಂಜರದಲ್ಲಿ

ಇಟ್ಟ. ಅದಕ್ಕೆ ಬೇಕಾದ ಹಾಲು ಹಣ್ಣುಗಳನ್ನು ಕೊಟ್ಟ. ಅದರೊಡನೆ ಆಟ ಆಡಿದ. ಸ್ವಲ್ಪ ದಿನಗಳಲ್ಲಿ ಶಂಕರ ಮತ್ತೆ ಗಿಳಿ ಸ್ನೇಹಿತರಾದರು. ಆದರೆ ಶಂಕರ ಮೀನನ್ನು ಕಾಣಲು ತಪ್ಪದೆ ನದಿಯ ತೀರಕ್ಕೆ ಹೋಗುತ್ತಿದ್ದ. ಒಂದು ದಿನ ಮೀನು,"ಶಂಕರ ನಾನು ನಿನ್ನ ಮನೆಯನ್ನು ನೋಡಬೇಕು. ಒಂದು ಪಾತ್ರೆಯನ್ನು ತೆಗೆದುಕೊಂಡು ಅದರಲ್ಲಿ ನೀರು ತುಂಬಿ, ಅದರಲ್ಲಿ ನನ್ನನ್ನಿಟ್ಟು ಎತ್ತಿಕೊಂಡು ಹೋಗಿ ತೋರಿಸು." ಎಂದಿತು. ಶಂಕರನು ಆಗಲಿ ಎಂದ. ಒಂದು ಅಗಲವಾದ ಪಾತ್ರೆಯನ್ನು ತಂದು ಅದಕ್ಕೆ ನೀರು ತುಂಬಿ ನದಿಯಲ್ಲಿ ಇಟ್ಟ. ಮೀನು ಅದರಲ್ಲಿ ಕುಳಿತಿತು. ಶಂಕರ ಅದನ್ನು ಎತ್ತಿಕೊಂಡು ಮನೆಗೆ ಹೋದ. ತನ್ನ ಅಮ್ಮನನ್ನು ಅದಕ್ಕೆ ತೋರಿಸಿದ. ಸ್ವಲ್ಪ ಪುರಿಯನ್ನು ಕೊಟ್ಟ. ಇಬ್ಬರೂ ಬಹಳ ಸಂತೋಷದಿಂದ ತಿಂದರು.

ಸ್ವಲ್ಪ ಹೊತ್ತಾಯಿತು. "ಶಂಕರಾ, ನಾನು ನದಿಯಲ್ಲಿ ಹಾಯಾಗಿ ಓಡಾಡಬೇಕು. ಕರೆದುಕೊಂಡು ಹೋಗು." ಎಂದು ಮೀನು

ಹೇಳಿತು. ಇದನ್ನು ಕೇಳಿ ಗಿಣಿಯ ಮರಿಯು, "ಶಂಕರಾ, ನಾನು ಗಗನಚರ ಆಕಾಶದಲ್ಲಿ ಹಾರಾಡಬೇಕು. ಈ ಪಂಜರದಿಂದ ನನ್ನನ್ನು ಬಿಟ್ಟುಬಿಡು." ಎಂದು ಬೇಡಿಕೊಂಡಿತು.

ಶಂಕರ ಯೋಚಿಸಿದ. "ಹೌದು, ಈ ಗಿಳಿನೂ ಆಕಾಶದಲ್ಲಿ ಹಾರಾಡಲಿ, ಮೀನು ನೀರಿನಲ್ಲಿ ಈಜಾಡಲಿ. ನಾನೂ ನೆಲದ ಮೇಲೆ ಓಡಾಡುತ್ತೇನೆ." ಎಂದು ಹೇಳುತ್ತಾ ಗಿಳಿಯ ಮರಿಗೆ ಹೇಳಿದ,"ಗಿಳಿಯ ಮರಿ, ನಿನ್ನನ್ನು ಬಿಡುತ್ತೇನೆ. ಆದರೆ ನೀನು ನನ್ನೊಡನೆ ಆಡಲು ಬರುತ್ತಿರಬೇಕು."ಎಂದು ಅದನ್ನು ಬಿಟ್ಟುಬಿಟ್ಟ. ಶಂಕರ ಪಂಜರದ ಬಾಗಿಲನ್ನು ತೆರೆದ. ಗಿಳಿಯ ಮರಿಯು "ಪುರ್‌ರ್‌ರ್‌ರ್" ಎಂದು ಹಾರಿ ಹೋಯಿತು. ಶಂಕರ ನದಿಯ ತೀರಕ್ಕೆ ಹೋದ. ಮೀನಿನ ಪಾತ್ರೆಯನ್ನು ನದಿಯ ನೀರಲ್ಲಿ ಇಟ್ಟ. "ಮೀನು ಹೋಗು." ಎಂದ. ಮೀನು ಗುಳು ಗುಳು ಶಬ್ಧ ಮಾಡುತ್ತಾ ಈಜುತ್ತಾ ಹೊರಟು ಹೋಯಿತು.

ಶಂಕರ ಮನೆಗೆ ಬಂದ. "ಎಲ್ಲವೂ ಅವು ಇರುವಲ್ಲೇ ಹಾಯಾಗಿರಲಿ. ಆದರೂ

ಅವೆಲ್ಲವೂ ಎಂದೆಂದೂ ನನ್ನೊಡನೆ ಸ್ನೇಹದಿಂದ ಇರಲಿ." ಎಂದುಕೊಂಡು ಅಮ್ಮನನ್ನು ಮುದ್ದು ಮಾಡುತ್ತಾ ಪ್ರೀತಿಯಿಂದ ಇದ್ದನು. *


**ಆಕರ: ಪುಟಾಣಿ ಮಕ್ಕಳ ವೈಜ್ಞಾನಿಕ ಕಥೆಗಳು**

**"ಮನ ಮಂಥನ"**

ನೀನು ಎಂದಾದರೂ ನಿನ್ನ ಮನೆಯಲ್ಲಿ ಅಮ್ಮ, ಅಪ್ಪ, ಅಣ್ಣ, ತಂಗಿ, ಗೆಳೆಯರ ಮೇಲೆ ಕೋಪಿಸಿಕೊಂಡಿರಬೇಕಲ್ಲವೆ? ಕೋಪ ಇಳಿದ ನಂತರ ನಿನಗೆ ಯಾವ ಭಾವನೆ ಬಂತು. ಆಗ ನೀನು ಏನು ಮಾಡಿದೆ?

**ಪಂಚಪಂತ್ರದ ಕಥೆ**

# ಆನೆಗಳನ್ನು ಕೊಲ್ಲದ ನರಿ



ಮಕ್ಕಳಿಗಾಗಿ

**ಒ**ಂದು ದೊಡ್ಡ ಕಾಡು. ಅಲ್ಲಿ ಎಷ್ಟೆಷ್ಟೋ ತರಹದ ಕಾಡು ಪ್ರಾಣಿ ಪಕ್ಷಿಗಳಿದ್ದವು. ಅವುಗಳಲ್ಲಿ ಒಂದು ಸಿಂಹ ತನ್ನ ಹೆಂಡತಿ ಸಿಂಹಿಣಿ ಜೊತೆ ವಾಸ ಮಾಡ್ತಾ ಇತ್ತು. ಅವೆರಡೂ ಕಾಡಿನಲ್ಲಿ ಬೇಟೆಯಾಡಿ ಆಹಾರ ಸಂಪಾದಿಸಿಕೊಳ್ಳುತ್ತಾ ಬದುಕಿದ್ದವು.

ಒಂದು ದಿನ ಆ ಸಿಂಹ ದಂಪತಿಗಳಿಗೆ ಎರಡು ಮರಿಗಳು ಹುಟ್ಟಿದವು. ಮರಿಗಳು ಬಹಳ ಮುದ್ದಾಗಿದ್ದವು.

ಅಂತಹ ಮುದ್ದಾದ ಮರಿಗಳು ಕಂಡು ಸಿಂಹ ಸಿಂಹಿಣಿಗೆ ಸಂತೋಷವೋ ಸಂತೋಷ. ಸಿಂಹಿಣಿಗೆ ಸಿಂಹ ಹೇಳಿತು: "ನೀನು ಸ್ವಲ್ಪ ದಿನ ಮನೆಯಲ್ಲೇ ಇರು. ಬೇಟೆಗೀಟೆ ಅಂತ ಹೊರಗೆ ಬರಬೇಡ. ನಮ್ಮ ಮರಿಗಳು ಬೆಳ್ದು ದೊಡ್ಡವರಾಗುವವರೆಗೂ ಅವನ್ನು ನೋಡಿಕೋ. ಬೇಟೆಯಾಡಿ ಕೂಳು ತರೋ ಕೆಲಸ ನಾನು ನೋಡಿಕೊಳ್ತೀನಿ."

ಸಿಂಹಿಣಿಗೂ ಅದೇ ಸರಿ ಎನಿಸಿತು. ಮಕ್ಕಳನ್ನು ನೋಡಿಕೊಂಡು ಅದು ಮನೆಯಲ್ಲೇ ಇತ್ತು.

ಸಿಂಹವು ದಿನಾಲೂ ಬೇಟೆಯಾಡಲು ಹೋಗುತ್ತಿತ್ತು. ಮನೆಗೆ ಸಾಕಷ್ಟು ಊಟವನ್ನು ತರುತ್ತಿತ್ತು. ಆದರೆ ಒಂದು ದಿನ ಅದಕ್ಕೆ ಒಂದು ಪ್ರಾಣಿಯೂ ಸಿಕ್ಕಲಿಲ್ಲ. ಕೊನೆಗೆ, ಸಂಜೆ ಮನೆಗೆ ವಾಪಸ್ಸು ಬರುತ್ತಿದ್ದಾಗ ಒಂದು ಮರಿ ನರಿ ಸಿಕ್ಕಿತು. ಅದನ್ನೇ ಹಿಡಿದುಕೊಂಡು ಬಂದು ಸಿಂಹಿಣಿಗೆ ಕೊಟ್ಟಿತು.

"ಸಿಂಹಿಣೀ, ನೋಡು ಇವತ್ತು ನನಗೆ

ಬೇಟೆ ಸಿಗೋದೇ ಬಹಳ ಕಷ್ಟ ಆಗಿಬಿಡ್ತು. ಕೊನೆಗೂ ಸಿಕ್ಕಿದ್ದು ಎಂದರೆ ಇದೇ ನೋಡು ಈ ನರಿಮರಿ". ಎಂದಿತು ಸಿಂಹ. "ಬೇಕಿದ್ದರೆ ಅದನ್ನೇ ಕೊಂದು ತಿನ್ನು. ಅದು ಮರಿ ಆಗಿರೋದರಿಂದ, ನನಗೆ ಕೊಲ್ಲಲು ಮನಸ್ಸೇ ಬರಲಿಲ್ಲ." ಎಂದಿತು.

"ಅದು ಮರಿ ಅಂತ ಅದನ್ನ ಕೊಲ್ಲೋದಿಕ್ಕೆ ನನಗೇ ಮನಸ್ಸು ಬರಲಿಲ್ಲ ಅಂತೀಯಾ. ಇನ್ನು ನಾನು ಅದನ್ನು ಕೊಲ್ತೀನಾ? ಅಂತಹುದೇ ಎರಡು ಮರಿಗಳಿಗೆ ನಾನು ತಾಯಿ ಅಲ್ವಾ? ನಾನು ಅದನ್ನ ಕೊಲ್ಲೋದಿಲ್ಲ. ಅದು ನನ್ನ ಮೂರನೆಯ ಮಗನ ಹಾಗೆ. ನಮ್ಮ ಮರಿಗಳ ಜೊತೆನೇ ಅದೂ ಬೆಳೆಯುತ್ತೆ ಬಿಡು." ಎಂದಿತು ಸಿಂಹಿಣಿ.

ಸಿಂಹಿಣಿಯು ತನ್ನ ಸ್ವಂತ ಮರಿಗಳೊಂದಿಗೆ ಮರಿನರಿಯನ್ನು ಪಾಲನೆ ಮಾಡತೊಡಗಿತು. ಮರಿನರಿಯು ಸಿಂಹದ ಮರಿಗಳೊಂದಿಗೆ ಬೆಳೆಯತೊಡಗಿತು.

ಮೂರು ಮರಿಗಳು ಯಾವಾಗಲೂ

ಒಟ್ಟಿಗೇ ಇರುತ್ತಿದ್ದವು. ಒಟ್ಟಿಗೇ ಓಡಾಡುತ್ತಿದ್ದವು, ಆಟವಾಡುತ್ತಿದ್ದವು. ಒಮ್ಮೊಮ್ಮೆ ಚಿಕ್ಕಪುಟ್ಟ ಸಾಹಸಗಳನ್ನೂ ಮಾಡುತ್ತಿದ್ದವು. ಕಾಡಿನೊಳಗೆ ಹೋಗಿ ತಾವು ಕಂಡ ಕಾಡು ಪ್ರಾಣಿಗಳನ್ನು ಅಟ್ಟಿಸಿಕೊಂಡು ಹೋಗುತ್ತಿದ್ದವು.

ಒಂದು ದಿನ ಕಾಡಿನಲ್ಲಿ ಕಾಡಾನೆಯೊಂದು ಬರುತ್ತಿತ್ತು. ಎರಡು ಸಿಂಹದ ಮರಿಗಳೂ ಆನೆಯನ್ನು ನೋಡಿದವು. ಕೊಲ್ಲಬೇಕೆಂದು ಅದನ್ನೇ ಹಿಂಬಾಲಿಸಿದವು.

ಆದರೆ ನರಿ ಮರಿಗೆ ಮಾತ್ರ ಹೆದರಿಕೆ. "ಅದೊಂದು ಆನೆ. ಅದರ ಹತ್ತಿರ ಹೋಗಬೇಡಿ. ಅದು ನಿಮ್ಮನ್ನು ತುಳಿದು ಕೊಲ್ಲುತ್ತೆ." ಎಂದು ನರಿಮರಿ ಕೂಗಿ ಅಲ್ಲಿಂದ ಪರಾರಿಯಾಯಿತು.

ತಮ್ಮ ಸೋದರನು ಹೀಗೆ ಪರಾರಿಯಾದುದನ್ನು ಕಂಡು ಸಿಂಹದ ಮರಿಗಳು ಸಹ ಹೆದರಿ ಮನೆಗೆ ಓಡಿದವು. ತಾವು ಕಂಡ ಆನೆಯ ಬಗ್ಗೆ ತಮ್ಮ ತಂದೆ ತಾಯಿಗಳಿಗೆ ತಿಳಿಸಿದವು. ತಮ್ಮ ಸೋದರ ಹೇಗೆ ಹೆದರಿ ಓಟ

ಕಿತ್ತ ಎಂಬುದನ್ನೂ ತಿಳಿಸಿದವು.

ಇವು ಹೇಳಿದ್ದನ್ನೆಲ್ಲಾ ನರಿ ಮರಿಯು ಕೇಳಿಸಿಕೊಂಡಿತು. ಅದರ ಮನಸ್ಸಿಗೆ ತುಂಬಾ ನೋವಾಯಿತು. ಕೋಪವೂ ಬಂತು. ಸಿಂಹದ ಮರಿಗಳತ್ತ ತಿರುಗಿ ಕೋಪದಿಂದ ಕೂಗಾಡಿತು.

"ನಾನೇನೂ ಹೇಡಿಯಲ್ಲ. ನಿಮ್ಮಷ್ಟೇ ನಾನೂ ಧೈರ್ಯಶಾಲಿ." ಎಂದು ಅಬ್ಬರಿಸಿತು. "ಬನ್ನಿ, ನನ್ನೊಡನೆ ಹೋರಾಡುವುದಕ್ಕೆ ಬನ್ನಿ. ಆಗ ತೋರಿಸುತ್ತೇನೆ ನಾನು ಎಂತಹವನು ಎಂಬುದನ್ನು." ಎಂದು ಸವಾಲನ್ನೂ ಹಾಕಿತು.

ಸಿಂಹಿಣಿಯು ನರಿಮರಿಯನ್ನು ಪಕ್ಕಕ್ಕೆ ಕರೆದು ಹೇಳಿತು,"ನಿನ್ನ ಸೋದರರ ಬಗ್ಗೆ ಆ ರೀತಿ ಮಾತನಾಡಬಾರದು."

ನರಿಮರಿಗೆ ಇನ್ನೂ ಕೋಪ ಬಂತು. "ನನ್ನನ್ನು ತಮಾಷೆ ಮಾಡಲು ಅವರಿಗೇನು ಹಕ್ಕಿದೆ?'' ಎಂದು ಕೇಳಿತು. ''ನಾನು ಧೈರ್ಯಶಾಲಿ. ಅವರಿಗಿಂತ ಯಾವ ರೀತಿಯಲ್ಲಿ ಕಮ್ಮಿ ಇದ್ದೇನೆ? ನಾನು ನನ್ನ ಶಕ್ತಿಯನ್ನು ತೋರಿಸಬಲ್ಲೆ. ಅವರಿಬ್ಬರನ್ನೂ ಕೊಂದು

ಹಾಕಬಲ್ಲೆ." ಎಂದಿತು ಕೋಪದಿಂದ.

ಸಿಂಹಿಣಿಗೆ ನರಿಮರಿಯನ್ನು ನೋಡಿ ಒಳಗೊಳಗೇ ನಗು. "ನೀನೇನೋ ಧೈರ್ಯಶಾಲಿ ಕಣಪ್ಪ ನಿಜ. ನೀನು ಮುದ್ ಮುದ್ದಾಗೂ ಇದ್ದೀಯಾ, ತುಂಬಾ ಬುದ್ಧೀನೂ ಇದೆ. ಆದ್ರೆ... ನಿನ್ನ ವಂಶದಲ್ಲಿ ಯಾರೂ ಅನೆಗಳನ್ನು ಕೊಲ್ಲೋದಿಲ್ವಲ್ಲಾ..! ಅಂತ ಹೇಳಿತು.

ನರಿ ಮರಿಗೆ ಸಿಂಹಿಣಿ ಹೇಳಿದ್ದು ಯಾವುದೂ ಅರ್ಥವಾಗಲಿಲ್ಲ. "ಅಮ್ಮಾ, ನೀನ್ ಹೇಳಿದ್ದು ಏನೂ ನನಗೆ ಅರ್ಥಾನೇ ಅಗ್ತಾ ಇಲ್ಲ..ಏನ್ ಹೇಳ್ತಾ ಇದ್ದೀಯಾಮ್ಮ? ಸ್ವಲ್ಪ ಬಿಡಿಸಿ ಹೇಳು." ಅಂತ ಕೇಳಿತು.

"ಕೇಳು, ನನ್ನ ಮುದ್ದು ಮರಿ, ನಿನ್ನ ತಾಯಿ ಒಬ್ಬ ನರಿ. ನನ್ನ ಗಂಡ ಸಿಂಹ ಬೇಟೆಗೆ ಅಂತ ಹೋಗಿದ್ದಾಗ, ನೀನು ಒಬ್ಬನೇ ಇಲ್ಲೋ ಅಳುತ್ತಾ ನಿಂತಿದ್ದೆಯಂತೆ. ಆಗ ನೀನಿನ್ನೂ ಪುಟ್ಟ ಕೂಸು. ನಿನ್ನನ್ನ ತಂದು ನನ್ ಕೈಲಿ ಕೊಟ್ಟ ನಮ್ಮ ಎರಡು ಮರಿಗಳ ಜೊತೆ ನೀನೂ ಒಬ್ಬ ಅಂತ ನಿನ್ನನ್ನ ನಾವು ಪ್ರೀತಿಯಿಂದ ಸಾಕೆದೆವು.

ಆದರೆ, ನೀನು ನರಿ ಎಂದು ನನ್ನ ಮಕ್ಕಳಿಗೆ ಗೊತ್ತಿಲ್ಲ. ನೀನು ಇಲ್ಲಿಂದ ಓಡಿ ಹೋಗಿ ನಿನ್ನ ಗುಂಪಿನವರನ್ನು ಸೇರಿಕೋ. ಇಲ್ಲದಿದ್ದಲ್ಲಿ ನನ್ನ ಮಕ್ಕಳು ನಿನ್ನನ್ನು ಕೊಂದು ತಿಂದು ಹಾಕುತ್ತವೆ!" ಎಂದಳು ಸಿಂಹಿಣಿ.

ನರಿ ಮರಿಗೆ ವಿಪರೀತ ದಿಗಿಲಾಯಿತು. "ಈ ಅಪ್ಪ ಅಮ್ಮ ಏನೋ ಬಹಳ ಒಳ್ಳೆಯವರು. ನನ್ನ ಸಾಕಿ ಸಲಹಿದಾರೆ. ಆದರೆ ಅವರ ಮರಿಗಳಿಗೆ ನಿಜ ಗೊತ್ತಾದ ಮೇಲೆ ಏನು ಮಾಡತಾವೋ ಏನೋ, ಯಾರಿಗೆ ಗೊತ್ತು? ಇಲ್ಲಿಂದ ಹೋದರೇನೇ ಒಳ್ಳೇದು ಅನಿಸುತ್ತೆ." ಅಂತ ಅಂದುಕೊಂಡಿದ್ದೇ ತಡ ತಕ್ಷಣವೇ ಓಡಿ ದೂರ ಹೋಗಿಬಿಟ್ಟಿತು. *

**ಆಕರ: ಪಂಚತಂತ್ರದ ಕಥೆಗಳು**

**"ಮನ ಮಂಥನ"**

ನಿನಗಿಂತಲೂ ಬಲಿಷ್ಠರನ್ನು ನೋಡಿದಾಗ, ನಿನ್ನ ಮನದಲ್ಲಿ ಏನು ವಿಚಾರ ಬರುತ್ತದೆ? ಅವರಿಂದ ನಿನಗೆ ಅಪಾಯವಿದೆ ಎಂದು ಗೊತ್ತಾದಾಗ ನೀನು ಏನು ಮಾಡುವೆ?

# ಬಾನೂ-ನೀಲೂ

ರಚನೆ: ಪ್ರೇಮಾ ಶಿವಾನಂದ,
ಧ್ವನಿ ಬಳಗ





**ಬಾ**ನೂ-ನೀಲೂ ಒಳ್ಳೆಯ ಗೆಳತಿಯರು. ಒಟ್ಟಿಗೆ ಆಟ-ಊಟ. ಇಬ್ಬರ ಶಾಲೆಯೂ ಒಂದೇ. ಅಷ್ಟೇ ಅಲ್ಲ ಇಬ್ಬರೂ ಅಕ್ಕಪಕ್ಕದ ಮನೆಯವರು. ಅವರ ಮನೆಯ ಹಿತ್ತಲಲ್ಲಿ ಸೊಪ್ಪು ಬೆಳೆಯುತ್ತಿದ್ದರು. ಒಂದು ದಿನ ಅವರು ಆ ಸೊಪ್ಪನ್ನು ಕಿತ್ತರು. ಕೈಯಲ್ಲಿ ಹಿಡಿದುಕೊಂಡು ತಮ್ಮ ಮನೆಯ ಮುಂದಿದ್ದ ಮರದ ಹತ್ತಿರ ಬಂದರು.

"ಏ ನೀಲೂ ನೋಡೆ, ನನ್ನ ಮೆಂತ್ಯ

ಸೊಪ್ಪು ಎಷ್ಟು ಚೆನ್ನಾಗಿದೆ” ಅಂದಳು ಬಾನು.

“ಓ.. ಹೋ.. ನಿನ್ನ ಮೆಂತ್ಯ ಸೊಪ್ಪಿಗಿಂತಲೂ ನಮ್ಮನೆ ಕೊತ್ತಂಬರಿ ಸೊಪ್ಪು ಇನ್ನೂ ಚೆನ್ನಾಗಿದೆ.” ಎಂದು ನೀಲೂ ಮರು ನುಡಿದಳು. ಸಣ್ಣದಾದ ಮಾತು, ನಿಧಾನಕ್ಕೆ ಬೆಳೆದು, ದೊಡ್ಡ ಜಗಳ ಆಗತೊಡಗಿತು. ಇಬ್ಬರೂ ತಮ್ಮ ತಮ್ಮ ಕೈಗಳಿದ್ದ ಸೊಪ್ಪಿನ ದಂಟುಗಳನ್ನು ಕಿತ್ತು ಒಬ್ಬರ ಮೇಲೊಬ್ಬರು ಎಸೆದರು.

ಸೊಪ್ಪಿನ ಕಟ್ಟುಗಳು ಚೆಲ್ಲಾಪಿಲ್ಲಿಯಾಗಿ ನೆಲದ ಮೇಲೆ ಬಿದ್ದವು. ತಕ್ಷಣ ಇಬ್ಬರೂ ಜೋರಾಗಿ ಅಳತೊಡಗಿದರು.

ಅಷ್ಟರಲ್ಲಿ ನೀಲೂವಿನ ಅಕ್ಕ ಶಾರು ಬಂದಳು. “ಯಾಕ್ರೇ, ಇಬ್ಬರೂ ಹೀಗೆ ಅಳ್ತಾ ಇದ್ದೀರಾ? ಏನಾಯಿತು?” ಕೇಳುತ್ತಾ, ನೆಲದ ಮೇಲೆ ಚದುರಿದ್ದ ಸೊಪ್ಪಿನ ಎಲೆಗಳತ್ತ ತನ್ನ ನೋಟವನ್ನು ಹರಿಸಿದಳು.

ಇಬ್ಬರೂ ನಡೆದದ್ದನ್ನು ತಿಳಿಸಿದರು. ಶಾರು ಇಬ್ಬರಿಗೂ ಸಮಾಧಾನ ಮಾಡಿದಳು.

ಮನೆ ಒಳಗೆ ಹೋಗಿ ಎರಡು ಖಾಲಿ ಮಣ್ಣಿನ ಕುಂಡಗಳನ್ನು ತಂದು, ಜೀವದ ಗೆಳತಿಯರಿಗೆ ಕೊಟ್ಟಳು. ಅದರಲ್ಲಿ ಮಣ್ಣು ತುಂಬಿ, ಟಮೋಟೊ ಬೀಜ ಹಾಕಲು ಇಬ್ಬರಿಗೂ ತಿಳಿಸಿದಳು. ಇಬ್ಬರೂ ಶಾರೂ ಹೇಳಿದಂತೆಯೇ ಮಾಡಿದರು.

ಆ ಕುಂಡಗಳನ್ನು ತಮ್ಮ ಮನೆಗಳ ಮುಂದೆ ಇಟ್ಟರು. ದಿನವೂ ಇಬ್ಬರೂ ಅವುಗಳಿಗೆ ನೀರುಣಿಸುತ್ತಿದ್ದರು. ಕೆಲವೇ ದಿನಗಳಲ್ಲಿ ಎರಡೂ ಕುಂಡಗಳಲ್ಲಿ ಚಂದನೆಯ ಟಮೋಟೊ ಗಿಡಗಳು ಬೆಳೆದವು. ರುಚಿಕರ ಹಣ್ಣು ಬಿಟ್ಟವು.

ಇಬ್ಬರೂ ಜೀವದ ಗೆಳತಿಯರು ಸಂತೋಷದಿಂದ ಕುಣಿದಾಡಿದರು.

*

**"ಮನ ಮಂಥನ"**

ಕಥೆಯಲ್ಲಿನ ಬಾನೂ, ನೀಲೂವಿನ ಹಾಗೆ ನೀನೂ ಕೂಡ ಗೆಳತಿ–ಗೆಳೆಯರ ಜೊತೆಗೂಡಿ ಕುಂಡಗಳಲ್ಲಿ – ಭೂಮಿಯಲ್ಲಿ ಬೀಜಹಾಕಿ ಗಿಡ ಬೆಳೆಸಿದ ಅನುಭವ ಕುರಿತು ಗೆಳತಿ–ಗೆಳೆಯರೊಂದಿಗೆ ಹಂಚಿಕೊ.

# Baanu-Neelu

ಅನು: ಕು.ವಚನಶ್ರೀ ಎಸ್.ಹೆಚ್



Baanu-Neelu were best friends. They did everything together. Both went to the same school. They were neighbors[1] too. One day, both of them came to the

**ಹೊಸ ಪದ**

**1. Neighbor** (ನೇಬರ್ ) –
**ನೆರೆ ಮನೆಯವರು/ಅಕ್ಕಪಕ್ಕದ ಮನೆಯವರು**

tree infront of their house with greens that were grown in the backyard[2] of their houses.

"Hey, Neelu. Look at how good my Fenugreek [3] is!" said Baanu.

"Oh… My coriander[4] leaves are better than yours!" Neelu snapped. A small talk soon turned

**ಹೊಸ ಪದಗಳು**

**2. Backyard** (ಬ್ಯಾಕ್‌ಯಾರ್ಡ್)

**– ಹಿತ್ತಲು**

**3. Fenugreek** (ಫೆನ್ಯೂಗ್ರಿಕ್)

**– ಮೆಂತ್ಯೆ ಸೊಪ್ಪು**

**4. Coriander** (ಕೊರಿಯಾಂಡರ್)

**– ಕೊತ್ತಂಬರಿ ಸೊಪ್ಪು**

into a big fight. Both started throwing[5] greens at each other. All the greens in their hands, fell on the floor and got scattered[6]. They felt bad when they saw that their greens are destroyed. They loudly started to cry.

Meanwhile, Neelu's yelder sister Sharu came said "What happened? Why are you both

**ಹೊಸ ಪದಗಳು**

**5. Throw** (ಥ್ರೊ) – **ಎಸೆ/ಒಗೆ/ಬಿಸಾಕು**

**6. Scatter** (ಸ್ಕ್ಯಾಟರ್ಡ್) – **ಚಲ್ಲಾಪಿಲ್ಲಿಯಾಗು/ಚದುರು**

**7. Console** (ಕನ್‌ಸೋಲ್) – **ಸಾಂತ್ವನ/ಸಮಾಧಾನ**

crying?" as she looked at the scattered leaves on the ground. Both explained what happened.

Sharu consoled[7] them. She brought two mud[8] pots and gave it to the best friends. She told both of them to fill mud and sow Tomato seeds[9] in them. Both of them did as Sharu had told.

They placed the pots in front of their houses. They watered the plants every day. In a few days,

**ಹೊಸ ಪದಗಳು**

**8. Mud** (ಮಡ್) – ಮಣ್ಣು / ಕೆಸರು

**9. Seed** (ಸೀಡ್) – ಬೀಜ

beautiful Tomato plants grew in the pots. Tasty fruits grew in them too. The best friends danced in happiness.

*

ರಚನೆ: ಪ್ರೇಮಾ ಶಿವಾನಂದ,
ಧ್ವನಿ ಬಳಗ
ಮೊ.ನಂ: ೯೬೩೨೪೪೧೮೫೦

# ಗುಬ್ಬಿ ಮತ್ತು ಮಕ್ಕಳು

– ಸುರೇಶ ಕಂಬಳಿ, ಕೊಪ್ಪಳ



ಬಾರೆ ಬಾರೆ ಗುಬ್ಬಿ ಮರಿ
ಎಲ್ಲಿಗೆ ಹೋಗಿದ್ದೆ
ನಿನ್ನ ದಾರಿ ಕಾದು ಕಾದು
ಮಾಡ್ಲೆ ಇಲ್ಲ ನಿದ್ದೆ

ಕಾಳು ಕಡ್ಡಿ ಹುಡುಕಲಿಕ್ಕೆ
ಅತ್ತ ಹೋದೆ ಹಾರಿ
ಏನು ತಪ್ಪು ತಿಳೀಬೇಡ
ವೆರಿ ವೆರಿ ಸಾರಿ





ನಮ್ಮ ಮನೆಗೆ ಬಂದಿದ್ರೆ
ಕೊಡ್ತಾ ಇದ್ದೆ ಸ್ವೀಟು

ಅಯ್ಯೋ ನಾನಾಗಲೇ ಬಂದೆ
ಹಾಕಿತ್ ಮನೆ ಗೇಟು





ಗುಬ್ಬಿ ಮರಿ ಗುಬ್ಬಿ ಮರಿ
ಮಾಡ್ಬೇಕಿತ್ತು ಸದ್ದು
ಹಾಸ್ಗೆನೆಲ್ಲ ಕಿತ್ತೆಸೆದು
ಬರ್ತಾ ಇದ್ದೆ ಎದ್ದು

ಕೂಗೋದಕ್ಕೂ ಶಕ್ತಿ ಇಲ್ಲ
ಖಾಲಿ ಇತ್ತು ಹೊಟ್ಟೆ
ಕಾಳು ಕಡ್ಡಿ ಹುಡ್ಕೊಂಡು
ಹಾಗೆ ಹೋಗಿ ಬಿಟ್ಟೆ





ಒಂದು ಕೆಲ್ಸ ಮಾಡಿಬಿಡು
ಮನೇಲಿ ಗೂಡು ಕಟ್ಟು
ಅನ್ನ ನೀರು ಕೊಡ್ತೀವಿ
ಅಗಲಿರಲಾರೆವು ಬಿಟ್ಟು

ಆಕರ: ಚಿಣ್ಣರ ಸಂಭ್ರಮ
ಸಂಪಾದಕರು: ಶಂಕರದೇವರು ಹಿರೇಮಠ
ಪ್ರಕಾಶಕರು: ಶಾರದಾ ಪ್ರಕಾಶನ, ಸಿಂಧನೂರು
ಮೊ.ನಂ: ೯೮೮೬೦೦೨೩೮೩

## ಸಂಪರ್ಕ ಮಾಹಿತಿ:

**ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ**
**# 76,'ಪುಷ್ಪಾಂಜಲಿ' 3ನೇ ಅಡ್ಡರಸ್ತೆ,**
**ಶಿವಗಿರಿ, ಧಾರವಾಡ 580 007**
**ಮೊ: 99866 61055**
**dhwanitrust@gmail.com**
**www. dhwanitrust.org**

ಗಮನಿಸಿ:
ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರುವುದು ಅಪಕ್ಷಣೀಯ.